ಪ್ರೇಮಕುಮಾರ್ ಹರಿಯಬ್ಬೆ

ಕಲೆ: ವೆಂಕಟ್ರಮಣ ಭಟ್

# ಆಕ್ರಮಣ

**ಹೊಸಳ್ಳಿಯಲ್ಲಿ ಜಮೀನು ಪಡೆದುಕೊಳ್ಳಲು ಮಠದವರು ಮಾಡಿದ ಪ್ರಯತ್ನ ಫಲ ಕಂಡಿತೆ? ತನ್ನ ಜಮೀನು ಉಳಿಸಿಕೊಳ್ಳಲು ಮೊಹಿದ್ದೀನ್ ಸಾಬರು ಎದುರಿಸಬೇಕಾದ ಸನ್ನಿವೇಶ ಯಾವ ಬಗೆಯದಾಗಿತ್ತು?**



## 1

ಯಾರೊ ಅಮೆರಿಕಾದ ಡಾಕ್ಟರಂತೆ. ನಮ್ಮೂರಲ್ಲಿ ಇಂಗ್ಲಿಷ್ ಸ್ಕೂಲು ಶುರು ಮಾಡ್ತಾರಂತೆ ಅನ್ನೋ ಸುದ್ದಿಯನ್ನು ಹೊಸಳ್ಳಿ ಜನ ಮೊದಲು ನಂಬಲಿಲ್ಲ. ತಲೆಗೆ ಹುಳಬಿಟ್ಟು ತಮಾಷೆ ಮಾಡೋ ಕಿತಾಪತಿಗಳ ಕೆಲಸ ಇದು ಅಂತ ಸುಮ್ಮನಿದ್ದರು. ಐದಾರು ದಿನ ಕಳೆದ ಮೇಲೆ, ಸ್ಕೂಲು ಶುರುಆಗೋದು ಪಕ್ಕಾ ಅಂತ ಸುದ್ದಿಯಾಯಿತು. ಬಡ ಮಕ್ಕಳಿಗೆ ಇಂಗ್ಲಿಷ್ ಸ್ಕೂಲಲ್ಲಿ ಅಡ್ಮಿಷನ್ ಫ್ರೀ ಅಂತೆ ಅಂತ ಪ್ರಚಾರ ಆಯಿತು.

‘ಈ ಕಾಲದಲ್ಲಿ ಸ್ಕೂಲು ಶುರುಮಾಡಿ ಬಡ ಮಕ್ಕಳಿಗೆ ಪುಗಸಟ್ಟೆ ಇಂಗ್ಲಿಷು ಕಲಿಸೊ ಮಹಾನುಭಾವ ಯಾರಯ್ಯ? ಎಲ್ಲಿದ್ದಾನಯ್ಯ ಅವನು. ಅವನ ಪಾದಗಳನ್ನು ತೋರಿಸ್ರಯ್ಯ... ತೊಳೆದು ನೀರನ್ನು ನನ್ನ ತಲೆ ಮೇಲೆ ಹಾಕಿಕೊಳ್ತೀನಿ’ ಅಂತ ಒಬ್ಬ ತಮಾಷೆಯಾಗಿ ಹೇಳಿದ್ದು ಕೇಳಿಸಿಕೊಂಡವರಿಗೆ ಮೋಜೆನಿಸಿತು. ಅಮೆರಿಕ ಡಾಕ್ಟರಿಗೆ ನಮ್ಮೂರ ಮೇಲೆ ಅಷ್ಟೊಂದು ಪ್ರೀತಿ ಯಾಕಂತೆ ಅಂತಲೂ ಕೆಲವರು ಕೇಳಿದರು.

‘ಸ್ಕೂಲು ಶುರುಮಾಡಬೇಕು ಅಂತಿರೊ ಡಾಕ್ಟರು ದುರ್ಗದವರಂತೆ. ಅಮೆರಿಕದಲ್ಲಿ ಪ್ರಾಕ್ಟೀಸುಮಾಡಿ ಚೆನ್ನಾಗಿ ದುಡ್ಡು ಮಾಡಿದ್ದಾರಂತೆ! ಸೂಗೂರು ಮಠದ ದೊಡ್ಡಸ್ವಾಮಿಗಳ ತಮ್ಮನ ಮಗನಂತೆ! ದೊಡ್ಡಪ್ಪನ ಹೆಸರಲ್ಲಿ ಸ್ಕೂಲು ಶುರುಮಾಡಬೇಕು ಅಂತ ಆಸೆಪಟ್ಟಿದ್ದಾರಂತೆ’ ಅನ್ನೋ ಮಾತುಕೇಳಿ ಊರವರಿಗೆ ಸಂತೋಷದ ಬದಲು ಆತಂಕವೇ ಆಯಿತು.

ಹೊಸಳ್ಳಿ, ಆಂಧ್ರದ ಗಡಿಗೆ ಹತ್ತಿರವಿರುವ ಕರ್ನಾಟಕದ ಮುನ್ನೂರೈವತ್ತು